**OS: 62/2023**
**D.W-1**

**ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ**

ದಿನಾಂಕಃ 08.01.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಿಂದ**

ತಿಲಕಪ್ಪ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ಅದೇ ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ತಿಲಕಪ್ಪ ನನಗೆ 18 ವರ್ಷ ಇದ್ದಾಗಿನಿಂದಲೂ ಪರಿಚಯ ಇರುತ್ತಾರೆ. ಸದರಿಯವರನ್ನು ನಾನೇ ಪರಿಚಯ ಮಾಡಿಕೊಂಡಿರುತ್ತೇನೆ. ತಿಲಕಪ್ಪನವರು ಮೃತಪಡುವ ಕಾಲಕ್ಕೆ ಅವರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರು. ದಾವಣಗೆರೆಯ ಬಾಪೂಜಿ, ಕೇರಳಾ ಎನ್ನಪೋಯ, ಆ ನಂತರ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅವರಿಗೆ ಅವರ ಮನೆಯವರು ಚಿಕಿತ್ಸೆ ಕೊಡಿಸಿರುತ್ತಾರೆ. ಸದರಿ ಮಾಹಿತಿಯನ್ನು ನನ್ನ ಗಂಡನಿಂದ ಪಡೆದುಕೊಂಡಿರುತ್ತೇನೆ. ಚಿತ್ರದುರ್ಗದಲ್ಲಿ ಅವರು ಮೃತಪಟ್ಟಿರುತ್ತಾರೆ. ತಿಲಕಪ್ಪನವರ ಶವ ಸಂಸ್ಕಾರವನು ಎಲ್ಲಿ ಮಾಡಿದ್ದರು ಎಂದರೆ ಚಿತ್ರದುರ್ಗದಲ್ಲಿ ಮಾಡಿರುತ್ತಾರೆ ಆದರೆ ಎಲ್ಲಿ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಅವರಿಗೆ ಯಾವಾಗಿನಿಂದ ಸದರಿ ಖಾಯಿಲೆ ಇತ್ತು ಎಂದು ನನಗೆ ಗೊತ್ತಿಲ್ಲ, ಅವರು ನನಗೆ ಹೇಳಿಲ್ಲ. ಕ್ಯಾನ್ಸರ್ ರೋಗಿಗಳು ತಮ್ಮ ಮಾನಸಿಕ ಆರೋಗ್ಯವನ್ನು ಕಳೆದುಕೊಳ್ಳುತ್ತಾರೆ ಹಾಗಾಗಿ ಅವರು ಯಾರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ.

ತಿಲಕಪ್ಪ, ರೇಣುಕಮ್ಮ ಹೆಸರಿನಲ್ಲಿ ಪಿ.ಡಿ.ಸಿ.ಸಿ ಬ್ಯಾಂಕ್, ಕೊಟ್ಟೂರಿನಲ್ಲಿ ಉಳಿತಾಯ ಖಾತೆ ತೆಗೆದಿದ್ದು ಅದರಲ್ಲಿ ಸಿ.ಐ.ಎಫ್ ನಂಬರ್ ಮತ್ತು ತಿಲಕಪ್ಪನವರು ಎಫ್.ಡಿ ಬ್ಯಾಂಕ್ ನಲ್ಲಿರುವ ಸಿ.ಐ.ಎಫ್ ನಂಬರ್ ಎರಡೂ ಒಂದೇ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿ.ಡಿ.ಸಿ.ಸಿ ಬ್ಯಾಂಕ್ ನಮ್ಮ ಮನೆಯಿಂದ 100-200 ಮೀಟರ್ ದೂರದಲ್ಲಿ ಇದೆ ಎಂದರೆ ಸರಿ. ತಿಲಕಪ್ಪನಿಗೆ 2017 ರಿಂದ ಕ್ಯಾನ್ಸರ್ ಖಾಯಿಲೆ ಇತ್ತು ಎಂದರೆ ಸರಿ. ತಿಲಕಪ್ಪನಿಗೆ ಅನಾರೋಗ್ಯ ಇದ್ದ ಕಾರಣ ಆತನನ್ನು ಪುಸಲಾಯಿಸಿ ಆತನ ಮಾನಸಿಕಸ್ಥಿತಿಯನ್ನು ಅರಿತುಕೊಂಡು ಈ ಹಿಂದೆ ರೇಣುಕಮ್ಮನ ಹೆಸರಿನಲ್ಲಿರುವ ಸಿ.ಐ.ಎಫ್ ನಂಬರ್ ನಲ್ಲಿರುವ ಹಣವನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಿಲಕಪ್ಪ ನನ್ನ ಮನೆಯಲ್ಲಿ ಇಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ತಿಲಕಪ್ಪ ನನಗೆ ವೈಯಕ್ತಿಕವಾಗಿ ಆ ಬಾಂಡ್ ನ್ನು ನೀಡಿಲ್ಲ

ಆತನ ಅನಾರೋಗ್ಯವನ್ನು ದುರುಪಯೋಗಪಡಿಕೊಂಡು ನಾನು ಪಡೆದುಕೊಂಡಿರುತ್ತೇನೆ. ತಿಲಕಪ್ಪನ ಮನೆಯ ಡೋರ್ ನಂಬರ್ ನನಗೆ ಗೊತ್ತಿಲ್ಲ. ತಿಲಕಪ್ಪನ ಮನೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು ತಿಲಕಪ್ಪನ ಹೆಂಡತಿ ಅಲ್ಲ ಹಾಗಾಗಿ ಪಿ.ಡಿ.ಸಿ.ಸಿ ಬ್ಯಾಂಕ್ ನಲ್ಲಿ ತಿಲಕಪ್ಪನ ಹೆಸರಿನಲ್ಲಿರುವ ನಿಶ್ಚಿತ ಠೇವಣಿ ಹಣವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ತಿಲಕಪ್ಪನ ಹೆಸರಿನಲ್ಲಿರುವ ಹಣ ಪಡೆಯಬೇಕೆಂಬ ಕಾರಣಕ್ಕೆ ರೇಣುಕಮ್ಮ ಆತನ ಹೆಂಡತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ತಿಲಕಪ್ಪನ ಕಾನೂನುಬದ್ಧ ವಾರಸುದಾರರು ಆಗಿರುವುದರಿಂದ ಅವರು ಮಾತ್ರ ಆತನ ಮೃತ ಸಂಬಂಧಿ ಆತನ ಹೆಸರಿನಲ್ಲಿರುವ ಹಣವನ್ನು ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಹಣ ಪಡೆಯಲು ಅರ್ಹಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ತಕರಾರು ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**